**ಸಾಕ್ಷಿಯನ್ನು ದಿನಾಂಕ 30.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ 2 ನೇ ಪ್ರತಿವಾದಿ ಪರ ಶ್ರೀ ಕೆ.ಆರ್.ಎನ್, ವಕೀಲರಿಂದಃ**

ದಿನಾಂಕ 21.10.1981 ರ ಮಂಜೂರಾತಿ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಡಿ-5 ಎಂದು ಗುರುತಿಸಲಾಯಿತು.

**ಪಾಟೀಸವಾಲು:** ವಾದಿಗಳ ಪರ ಶ್ರೀ ಕೆ.ಎಸ್.ಎನ್, ವಕೀಲರಿಂದಃ

ಈ ದಾವೆ ಸಲ್ಲಿಸುವ ಸಮಯದಲ್ಲಿ ದಿವಂಗತ ಮಾದಪ್ಪರವರ ಗಂಡುಮಕ್ಕಳಾದ ವಾದಿಗಳು ಮಾತ್ರ ದಾವೆ ಸಲ್ಲಿಸಿದ್ದರು ಎಂದರೆ ಸರಿ. ನಂತರ ಈ ದಾವೆ ಚಾಲ್ತಿಯಲ್ಲಿರುವಾಗ ದಿವಂಗತ ಮಾದಪ್ಪರವರ ಹೆಣ್ಣುಮಕ್ಕಳನ್ನು ಈ ದಾವೆಯಲ್ಲಿ 3 ರಿಂದ 5 ನೇ ವಾದಿಗಳನ್ನಾಗಿ ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ–5 ರಲ್ಲಿ ವಾದಿಗಳ ಮುತ್ತಾತ ಸಿದ್ದಮಲ್ಲಯ್ಯ ಬಿನ್ ಮಲ್ಲಯ್ಯರವರ ಹೆಸರಿನಲ್ಲಿ ದಾವಾ ತಪಶೀಲು ಸ್ವತ್ತಿನ ಸರ್ವೆ ನಂ. 451/2 ರಲ್ಲಿರುವ 2 ಎಕರೆ 33 ಗುಂಟೆ ಎಂದು ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಿಪಿ–11 ರಲ್ಲೂ ಕೂಡ ಸಿದ್ದಮಲ್ಲಯ್ಯ ಬಿನ್ ಮಲ್ಲಯ್ಯರವರ ಹೆಸರಿನಲ್ಲಿ ದಾವ ಸ್ವತ್ತಿನ ಸರ್ವೆ ನಂ.451/2 ರಲ್ಲಿರುವ 2 ಎಕರೆ 33 ಗುಂಟೆ ಎಂದು ನಮೂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ–5 ರ ಬಗ್ಗೆ ಲಿಖಿತ ಹೇಳಿಕೆಯಲ್ಲಾಗಲಿ ಅಥವಾ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಾಗಲಿ ಹೇಳಿರುವುದಿಲ್ಲ ಎಂದರೆ ಸರಿ, ಆದರೆ ಸದರಿ ದಾಖಲೆ ಇತ್ತೀಚೆಗೆ ಹುಡುಕಿದಾಗ ಸಿಕ್ಕಿರುತ್ತದೆ. ನಿಡಿ–5 ನ್ನು ನನ್ನ ಅಣ್ಣ 1 ನೇ ಪ್ರತಿವಾದಿಯಾದ ನಂಜಪ್ಪರವರು ಪಡೆದುಕೊಂಡಿದ್ದು ನನಗೆ ಕೊಟ್ಟಿರಲಿಲ್ಲ, ಆದರೆ ಮನೆಯಲ್ಲಿ ಹುಡುಕಿದಾಗ ಸದರಿ ದಾಖಲೆ ಸಿಕ್ಕಿದ್ದು, ನಾನು ಈ ದಿವಸ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ದಾವಾ ತಪಶೀಲು ಸ್ವತ್ತಿನ ಸರ್ವೆ ನಂ. 451/2 ರಲ್ಲಿನ 2 ಎಕರೆ 33 ಗುಂಟೆ ಜಮೀನು ಸಿದ್ದಮಲ್ಲಯ್ಯರವರ ಹೆಸರಿಗೆ

ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಸಿದ್ದಮಲ್ಲಯ್ಯ ವಾದಿಗಳ ಮುತ್ತಾತ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯನ್ನು ಸಿದ್ದಮಲ್ಲಪ್ಪ @ ಸಿದ್ದಮಲ್ಲಯ್ಯ ಎಂದು ಎರಡು ಹೆಸರಿನಿಂದಲೂ ಕರೆಯುತ್ತಾರೆ. ನ್ಯಾಯಾಲಯದಿಂದ ಸಮನ್ಸ್ ಬಂದಾಗ ಅದನ್ನು ಸ್ವೀಕರಿಸುವ ಸಮಯದಲ್ಲಿ ವಾದಿಗಳು ನಮೂದಿಸಿರುವ ನನ್ನ ತಂದೆಯ ಹೆಸರು ಸಿದ್ದಮಲ್ಲಪ್ಪ ಆಗಿರುವುದಿಲ್ಲ, ಬದಲಾಗಿ ನನ್ನ ತಂದೆಯ ಸಿದ್ದಮಲ್ಲಪ್ಪ @ ಸಿದ್ದಮಲ್ಲಯ್ಯ ಆಗಿರುವುದರಿಂದ ಸಮನ್ಸ್ ನ್ನು ತಿರಸ್ಕಾರ ಮಾಡಿರುತ್ತೀರಾ ಎಂದರೆ ಆ ಸಮಯದಲ್ಲಿ ನನಗೆ ಗೊತ್ತಾಗಿರುವುದಿಲ್ಲ. ಸಮನ್ಸ್ ಪಡೆದ ನಂತರ ನಮ್ಮ ವಕೀಲರನ್ನು ಭೇಟಿಯಾದಾಗ ನನ್ನ ತಂದೆಯ ಹೆಸರು ಸಿದ್ದಮಲ್ಲಪ್ಪ @ ಸಿದ್ದಮಲ್ಲಯ್ಯ ಎಂದು ಮಾಹಿತಿ ನೀಡಿರುತ್ತೇನೆ. ನಾನು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ನನ್ನ ತಂದೆಯ ಹೆಸರನ್ನು ಸಿದ್ದಮಲ್ಲಪ್ಪ @ ಸಿದ್ದಮಲ್ಲಯ್ಯ ಎಂದು ಹೇಳಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ನನ್ನ ತಂದೆಯ ಹೆಸರನ್ನು ಸಿದ್ದಮಲ್ಲಪ್ಪ ಎಂದು ಬರೆಸಿದ್ದು, ಸಿದ್ದಮಲ್ಲಪ್ಪ @ ಸಿದ್ದಮಲ್ಲಯ್ಯ ಎಂದು ಬರೆಯಿಸಿಲ್ಲ ಎಂದರೆ ಸರಿ. ನಿಪಿ-12 ರಲ್ಲಿ ವಾದಿಗಳು ದಾವಾ ಸ್ವತ್ತಿನ ಸರ್ವೆ ನಂಬರ್ ನ ಆಸ್ತಿಯಲ್ಲಿ ಅನುಭವದಲ್ಲಿರುತ್ತಾರೆಂದು ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ, ಆದರೆ ನಾವು ಅನುಭವದಲ್ಲಿರುತ್ತೇವೆ. ನಿಪಿ-13 ರಲ್ಲಿ ರಾಜಸ್ವ ನಿರೀಕ್ಷಕರು ಮಹಜರ್ ತಯಾರಿಸುವಾಗ ದಾವಾ ಸ್ವತ್ತು ವಾದಿಗಳ ಮುತ್ತಾತ ಸಿದ್ದಮಲ್ಲಯ್ಯ ರವರಿಗೆ ಭೂ ನ್ಯಾಯ ಮಂಡಳಿಯಿಂದ ಬಂದಿರುತ್ತದೆ ಎಂದು ಹಾಗೂ ಸದರಿ ಸ್ವತ್ತಿನಲ್ಲಿ ವಾದಿಗಳೇ ಸ್ವಾಧೀನದಲ್ಲಿರುತ್ತಾರೆಂದು ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 451/2 ರಲ್ಲಿನ 2 ಎಕರೆ 33 ಗುಂಟೆ ಪ್ರದೇಶದಲ್ಲಿ ನಾವು ಅನುಭವದಲ್ಲಿರುತ್ತೇವೆಂದು ನಕ್ಷೆಯನ್ನಾಗಲಿ ಅಥವಾ ಮಹಜರನ್ನಾಗಲಿ ತಯಾರಿಸಿರುವುದಿಲ್ಲ. ಸರ್ವೆ ನಂ. 451/1 ರ 2 ಎಕರೆ 25 ಗುಂಟೆ ಆಸ್ತಿ ನಮಗೆ ಸೇರಿದ ಆಸ್ತಿಯಾಗಿರುತ್ತದೆ. 1 ನೇ ಪ್ರತಿವಾದಿ ಮತ್ತು ನಾನು ಸಹೋದರರಾಗಿದ್ದು, ಸಿದ್ದಮಲ್ಲಪ್ಪರವರ ಮಕ್ಕಳಾಗಿರುತ್ತೇವೆ ಎಂದರೆ ಸರಿ. ಈ ಹಿಂದೆ ನಾನು 1 ನೇ ಪ್ರತಿವಾದಿಯ

ವಿರುದ್ಧ ಮೂಲ ದಾವೆ ಸಂಖ್ಯೆ 477/2011 ರಂತೆ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ನಿಪಿ-15 ರಲ್ಲಿ ನಮೂದಿಸಿರುವಂತೆ ಸರ್ವೆ ನಂ. 451/1 ರಲ್ಲಿ 1 ಎಕರೆ 30 ಗುಂಟೆ ಎಂದು ನಮೂದಾಗಿದೆ ಎಂದರೆ ಸರಿ. ಸರ್ವೆ ನಂ. 451/1 ರಲ್ಲಿ 1 ಎಕರೆ 30 ಗುಂಟೆ ನನಗೆ ಸೇರಿದ್ದು, ಉಳಿಕೆ ಜಮೀನು 1 ನೇ ಪ್ರತಿವಾದಿಗೆ ಸೇರಿರುತ್ತದೆ. ನಿಪಿ-15 ರ 3 ನೇ ಖಂಡಿಕೆಯ 2 ನೇ ಪುಟದಲ್ಲಿ ಸರ್ವೆ ನಂ. 451/1 ರಲ್ಲಿನ 1 ಎಕರೆ 33 ಗುಂಟೆ ಜಮೀನು ನನ್ನ ತಂದೆಗೆ ಮತ್ತು 32 ಗುಂಟೆ ಜಮೀನು ನನ್ನ ಸಹೋದರ ದೊರೆಸ್ವಾಮಿಗೆ ಬಂದಿರುತ್ತದೆ ಬರೆಯಿಸಿರುತ್ತೇನೆ ಎಂದರೆ ಸರಿ. ಸರ್ವೆ ನಂ. 451/1 ರಲ್ಲಿರುವ 2 ಎಕರೆ 25 ಗುಂಟೆ ಜಮೀನಿನ ದಕ್ಷಿಣಕ್ಕೆ - ನಮ್ಮದೇ ಜಮೀನು ಇರುತ್ತದೆ, ಅದರ ಸರ್ವೆ ನಂ. 451/2 ಆಗಿರುತ್ತದೆ. ನಿಪಿ-15 ರಲ್ಲಿ ಚೆಕ್ ಬಂದಿ ಮತ್ತು ಆಸ್ತಿಯ ವಿವರಣೆಯಲ್ಲಿ ದಕ್ಷಿಣಕ್ಕೆ - ಗೌಡಿಕೆ ಮಲ್ಲಪ್ಪರವರ ಮಗ ಮಾದಪ್ಪರವರ ಜಮೀನು ಎಂದು ಬರೆಯಿಸಿರುತ್ತೇನೆ ಎಂದರೆ ನಾನು ಬರೆಯಿಸಿರುವುದಿಲ್ಲ, ಆ ಸಮಯದಲ್ಲಿ ನನ್ನ ಜೊತೆ ಬಂದಿದ್ದ ಇನ್ನೊಬ್ಬರು ಬರೆಯಿಸಿರಬಹುದು. ನಿಪಿ-15 ರಲ್ಲಿ ದಕ್ಷಿಣಕ್ಕೆ ಗೌಡಿಕೆ ಮಲ್ಲಪ್ಪರವರ ಮಗ ಮಾದಪ್ಪರವರ ಜಮೀನು ಇದೆ ಎಂದು ನಾನೇ ಮಾಹಿತಿ ನೀಡಿ ಬರೆಯಿಸಿದ್ದರೂ ಕೂಡ ನನ್ನ ಜೊತೆ ಬಂದಿದ್ದ ಇನ್ನೊಬ್ಬರು ಬರೆಯಿಸಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಸಿದ್ದಮಲ್ಲಪ್ಪ @ ಸಿದ್ದಮಲ್ಲಯ್ಯ ಎಂದು ತೋರಿಸಲು ಪಹಣಿ ಪತ್ರಿಕೆಯನ್ನು ಹಾಜರುಪಡಿಸುತ್ತೇನೆ. ನಿಡಿ-3 ರಲ್ಲಿ ನಂಜುಂಡಸ್ವಾಮಿ ಬಿನ್ ಸಿದ್ದಮಲ್ಲಪ್ಪ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ಪಹಣಿ ಪತ್ರಿಕೆಯಲ್ಲಿ ಸರ್ವೆ ನಂ.452/3 ರಲ್ಲಿನ 1 ಎಕರೆ 13 ಗುಂಟೆ 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಮತ್ತು ಸದರಿ ದಾಖಲೆಯಲ್ಲಿ ಎಂ ಎಸ್ ನಂಜಪ್ಪ ಬಿನ್ ಸಿದ್ದಮಲ್ಲಪ್ಪ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು **ನಿಪಿ-23** ಎಂದು ಗುರುತಿಸಲಾಯಿತು. ಈಗ ನನಗೆ

ತೋರಿಸುತ್ತಿರುವ ಹದಿನಾರು ಗ್ರಾಮದ ಸರ್ವೆ ನಂ. 454/2 ರಲ್ಲಿರುವ 1 ಎಕರೆ 20 ಗುಂಟೆ 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಮತ್ತು ಸದರಿ ದಾಖಲೆಯಲ್ಲಿ ಎಂ ಎಸ್ ನಂಜಪ್ಪ ಬಿನ್ ಸಿದ್ದಮಲ್ಲಪ್ಪ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿ ಗುರುತಿಸಿದ್ದರಿಂದ, ಅದನ್ನು **ನಿಪಿ-24** ಎಂದು ಗುರುತಿಸಲಾಯಿತು. ನಮ್ಮ ಕುಟುಂಬದಲ್ಲಿ ಪಂಚಾಯಿತಿ ಪಾರಿಕತ್ ಆಗಿರುತ್ತದೆ, ಆದರೆ ಯಾವಾಗ ಆಗಿರುತ್ತದೆಂದು ನನಗೆ ನೆನಪಿಲ್ಲ. ನಾನು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ದಿನಾಂಕ 05.10.1997 ರಂದು ಪಾಲುಪಟ್ಟಿಯಾಗಿರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ಪಾಲುಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಪಾಲುಪಟ್ಟಿಯಲ್ಲಿ ಸರ್ವೆ ನಂ. 451/2 ರ 2 ಎಕರೆ 33 ಗುಂಟೆ ಆಸ್ತಿಯನ್ನು ಸೇರಿಸಿರುತ್ತೇವೆ. ಲಿಖಿತ ಹೇಳಿಕೆಯಲ್ಲಿ ದಾವಾ ಸ್ವತ್ತಿನ ಸರ್ವೆ ನಂಬರ್ ಆಸ್ತಿಯನ್ನು ಪಾಲುಪಟ್ಟಿಯಲ್ಲಿ ಸೇರಿಸಿರುವುದಿಲ್ಲವೆಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಂಚಾಯತ್ ಪಾಲುಪಟ್ಟಿ 1 ನೇ ಪ್ರತಿವಾದಿಯ ಬಳಿಯಿದ್ದು, ಅವರಿಂದ ಪಡೆದು ಹಾಜರುಪಡಿಸುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂಬರ್ ಆಸ್ತಿಗೆ ಪಂಚಾಯತ್ ಪಾಲುಪಟ್ಟಿ ಆದ ದಿನಾಂಕದಿಂದಲೂ ಕಂದಾಯ ಪಾವತಿ ಮಾಡುತ್ತಾ ಬಂದಿರುತ್ತೇನೆ.

**ಈ ಹಂತದಲ್ಲಿ ವಾದಿಗಳ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**
**ನಂಜನಗೂಡು.**